ಕಥೆ




ಮಂಜುಳಾ ಜಿ.ಎಚ್‌

ಕಲೆ: ಎಸ್‌.ವಿ. ಹೂಗಾರ್


# ಅರಿವಿನ ಆ ತೀರದ ಸತ್ಯ



‘ಕೆಂಚಕ್ಕ, ಓಯ್‌ ಕೆಂಚಕ್ಕ ಹೊತ್ತಾಯ್ತು ಬರಕಿಲ್ವಾ. ಅವ್ವ ಕರಿತಾವ್ಳೆ’

‘ಬಂದೆ ಕಣ್ಣಾಕ್ಕ, ಒಂದೆ ನಿಮಿಷ’ ಎನ್ನುತ್ತಾ, ‘ಯವ್ವಾ, ಎಲ್ಲೂ ಹೋಗಬ್ಯಾಡ, ಮಡಕೀಲಿ ಗಂಜಿ ಮಡಗಿವ್ನಿ. ಹಸಿವು ಆತೂ ಅಂದ್ರ ತಕ್ಕೊಂಡು ಕುಡಿ, ಮಗಿ, ನಾ ಬರೋದು ತಡ ಆದ್ರುವೇ ಚಿಂತೆ ಮಾಡಬ್ಯಾಡ, ಅಳಬ್ಯಾಡ’ ಎಂದು ಮಗಳಿಗೆ ಹೇಳಿ ಕೆಂಚಿ ಮುನ್ಸಿಪಾಲಿಟಿ ಕೆಲಸಕ್ಕೆ ಕರಿಯವ್ವನ ಮನೆ ಕಡೆ ಹೊರಟಳು. ಕೆಂಚಿಯನ್ನು ನೋಡುತ್ತಿದ್ದ ಕರಿಯವ್ವನಿಗೆ, ಕೆಂಚಿ ಬದುಕು ಕಂಡು ಪಾಪವೆನಿಸಿತು. ಪಾಪದವಳು ಎಂದೆನಿಸಿ ತಾನೇ ಮುನ್ಸಿಪಾಲಿಟಿ ಕೆಲಸಕ್ಕೆ ಕರೆದುಕೊಂಡು ಹಚ್ಚಿದಳು. ಹಾಗೆ ಮಾತಾಡ್ತಾ ಹೊಂಟರು. ಅದು ಬೆಳಗಿನ ಜಾವ ಐದು ಗಂಟೆಯ ಸಮಯ. ಕರಿಯವ್ವ ಮಾರ್ಕೆಟ್‌ ಏರಿಯಾಕ್ಕೆ ಹೋದಳು. ಕೆಂಚಿ ಮಿನಿ ವಿಧಾನಸೌಧದ ದಾರಿ ಹಿಡಿದಳು. ಇವರಿಬ್ಬರೂ ಮತ್ತೆ ಒಂದಾಗುವುದು ಮಧ್ಯಾಹ್ನ ಎರಡು ಗಂಟೆಗೆ ಹಾಜರಿ ತೆಗೆದುಕೊಳ್ಳುವ ಸಮಯಕ್ಕೆ. ಕೆಂಚಿಗೆ ಎಷ್ಟು ಜನ ಹೀಯ್ಯಾಳಿಸಿದರೂ, ಬೈದರೂ ಈ ಉದ್ಯೋಗ ಬಿಟ್ಟು ಬೇರೆ ಗೊತ್ತಿಲ್ಲ. ಅವಳ ಅಜ್ಜ, ಅಜ್ಜಿಯಿಂದ ಇದೇ ಉದ್ಯೋಗವನ್ನೇ ಮುಂದುವರಿಸಿಕೊಂಡು ಬಂದಿದ್ದರಿಂದ ಅವಳು ಕೂಡ ಈ ಕೆಲಸವನ್ನೇ ನೆಚ್ಚಿಕೊಂಡಿದ್ದಳು.

ಮೊನ್ನೆ ಅವಳು ತುಂಬಾ ಖುಷಿಯಾಗಿದ್ಲು. ನಾನು ತಡೆದುಕೊಳ್ಳಲಾರದೇ ಕೇಳಿದೆ. ‘ಕೆಂಚಕ್ಕ, ನೀನು ತುಂಬಾ ಖುಷಿಯಾಗಿರೋದನ್ನ ನಾನು ಇವತ್ತೆಯಾ ನೋಡಿದ್ದು. ಇದೇ ಥರ ನಗುನಗುತಾ ಇರು’ ಎಂದೆ. ‘ನಮ್ಮಂಥವರ ಬದುಕಿನ್ಯಾಗೆ, ನಗುನಗುತಾ ಇರೋದು ಕನಸಿನ ಮಾತು ಬಿಡು ಯವ್ವಾ’ ಎಂದಳು.

‘ಯಾಕೆ ಹಿಂಗೆ ಮಾತಾಡ್ತಿ ಕೆಂಚಕ್ಕ’ ಎಂದಾಗ, ‘ಮತ್ತೇನ್ನೇಳ್ಳಿ ಯವ್ವಾ... ಇದ್ದೊಬ್ಬ ಮಗ ಸಾಲಿ ಕಲೀಲಿ ದೊಡ್ಡ ಸಾಹೇಬ ಆಗ್ಲಿ, ಅಂತಾ ಆಸೆಪಟ್ಟು